ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದನ್ನು ಡಿಪಾರ್ಟ್‌ಮೆಂಟಿನವರು ಮಾಡಿಲ್ಲ. ಬೇರೆ ಡಿಪಾರ್ಟ್‌ಮೆಂಟ್ ಮಾಡಿದ್ದು ಎಂದು ಗೊತ್ತಾದಾಗ, ಆಮೇಲೇ ರಾಜೀನಾಮೆ ಕೊಟ್ಟು ಬೇರೆಯವರ ನಾಮಿನೇಶನ್ ಆಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನು ಮಾರಾಟ ಸಂಸ್ಥೆಗೆ ಕೇವಲ ಕಾಂಗ್ರೆಸ್ಸಿನವರನ್ನೇ ಸೇರಿಸತಕ್ಕಂತಹ ನೀತಿ ಇವರಲ್ಲಿ ಇದೆ. ಪ್ರಜಾಪ್ರಭುತ್ವದ ನೀತಿಯಂತೆ ಇದರಲ್ಲಿ ವಿರೋಧ ಪಕ್ಷದವರಿಗೂ ಒಂದು ಅವಕಾಶವನ್ನು ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಸಹಕಾರಿ ಸಂಸ್ಥೆ, ಯಾರು ಬೇಕಾದರೂ ಶೇರ್ ತೆಗೆದುಕೊಳ್ಳಬಹುದು, ಯಾರು ಬೇಕಾದರೂ ಎಲೆಕ್ಷನಿಗೆ ನಿಂತು ಎಕ್ಸ್‌ಕ್ಯೂಟಿವ್ ಕಮಿಟಿಗೆ ಬರಬಹುದು.

ಶ್ರೀ ಬಿ. ಭಾನ್ಕರ್ ಶೆಟ್ಟಿ.—ಈವಾಗಲೇ ತಾವು ಹೇಳಿದ್ದೀರಿ, ನಾವು ಮಾಡಲಲ್ಲ, ಬೇರೆ ಇರಾಖಿಯವರು ನಾಮಿನೇಶನ್ ಮಾಡಿದ್ದಾರೆಂದು. ಇನ್ನೊಂದು ಪ್ರಶ್ನೆಗೆ ಉತ್ತರದಲ್ಲಿ ಜನರಲ್ ಬಾಡಿಯಲ್ಲಿ ಅಮೆಂಡ್‌ಮೆಂಟ್ ಮಾಡಬಹುದು ಎಂದು. ಹಾಗಾದರೆ ಅಮೆಂಡ್‌ಮೆಂಟ್ ಮಾಡತಕ್ಕ ಅಧಿಕಾರ ನಿಮಗೆ ಇದೆ. ಆದ್ದರಿಂದ ಮಾನುಗಾರಿಕೆಯ ಫೆಡರೇಶನಿನಲ್ಲಿ ಹೆಚ್ಚಾಗಿ ವಿಧಾನಸಭಾ ಸದಸ್ಯರು ಆಸಕ್ತಿ ವಹಿಸುವುದರಿಂದ, ಮಾತ್ಸ್ಯವಲ್ಲದೆ ಸರ್ಕಾರದ ಹಣ ಅಲ್ಲದೆ ಆಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೋರೇಶನಿಂದ ಇದಕ್ಕೆ 1.25 ಕೋಟಿ ರೂಪಾಯಿ ಸಹಾಯಧನ ದೊರಕಿರುವುದರಿಂದ, ಇದರ ವ್ಯವಹಾರಗಳನ್ನು ಸರಿಯಾಗಿ ನೋಡಿಕೊಂಡು ಹೋಗುವಂತೆ ಕರಾವಳಿ ಪ್ರದೇಶದ ಎಂ. ಎಲ್. ಎ. ಗಳನ್ನು ನಾಮಿನೇಶನ್ ಮಾಡುವುದಕ್ಕೆ ನೋಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೋ-ಆಪರೇಟಿವ್ ಫೆಡರೇಷನ್‌ನಲ್ಲಿ ಇರಬಹುದಾದ್ದು 17 ಜನ ಡೈರೆಕ್ಟರುಗಳು. ಅವರ ಪೈಕಿ 3 ಜನರನ್ನು ನಾಮಿನೇಟ್ ಮಾಡುವುದಕ್ಕೆ ಅಧಿಕಾರ ಇದೆ. 3 ಜನಗಳ ಪೈಕಿ ಡೆಪ್ಯುಟಿ ಡೈರೆಕ್ಟರ್ ಆಫ್ ಫಿಷರೀಸ್ ಒಬ್ಬರು, ಡೆಪ್ಯುಟಿ ಡೈರೆಕ್ಟರ್ ಆಫ್ ಕೋ-ಆಪರೇಷನ್ ಒಬ್ಬರು, ಇನ್ನೊಬ್ಬರು ಅಲ್ಲಿರುವ ಜಿಲ್ಲಾಧಿಕಾರಿಗಳ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಈ ಮೂರು ಜನಗಳನ್ನು ಟೆಕ್ನಿಕಲ್ ಗೈಡೆನ್ಸ್ ಕೊಡುವುದಕ್ಕೋಸ್ಕರ ನಾಮಿನೇಟ್ ಮಾಡುವುದಕ್ಕೆ ಅವಕಾಶ ಇದೆ. ಬೇರೆ ಯಾರನ್ನೂ ನಾಮಿನೇಟ್ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈ ತರಹ ಸಹಕಾರಿ ಸಂಘಗಳಿಗೆ ಸರ್ಕಾರಿ ಅಧಿಕಾರಿಗಳನ್ನು ನಾಮಕರಣ ಮಾಡುವುದರಿಂದ ಅಲ್ಲಿ ಸರಿಯಾಗಿ ಕೆಲಸ ಆಗದೆ ನಿಷ್ಪಲವಾಗಿರುತ್ತದೆ. ಆದ್ದರಿಂದ ಇಂತಹ ಸಹಕಾರಿ ಸಂಘಗಳಲ್ಲಿ ಎಂ. ಎಲ್. ಎ. ಗಳನ್ನು ನೇಮಕ ಮಾಡಿ ಅಲ್ಲಿ ದುಡ್ಡು ಸರಿಯಾಗಿ ವಿನಿಯೋಗವಾಗುವ ಹಾಗೆ ಮಾಡುವುದಕ್ಕೆ ಏನು ಆತಂಕ ಇದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ಸದಸ್ಯರ ಅಪಾದನೆಯನ್ನು ನಾನು ಒಪ್ಪುವುದಿಲ್ಲ. ಸರ್ಕಾರದ ಅಧಿಕಾರಿಗಳು ನೇಮಕವಾಗಿರತಕ್ಕ ಸಮಿತಿಗಳ ಸಭೆಗೆ ಅಧಿಕಾರಿಗಳು ಹೋಗದೆ ಇರತಕ್ಕ ಸಂದರ್ಭಗಳಲ್ಲಿ ಬೇರೆ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಆದ್ದರಿಂದ ಟೆಕ್ನಿಕಲ್ ಗೈಡೆನ್ಸ್ ಕೊಡುವುದಕ್ಕೋಸ್ಕರ ಕೆಲವು ಸ್ಥಾನಗಳನ್ನು ಇಟ್ಟುಕೊಂಡಿದೆ.

Regularisation of Services of Local Candidates

472. Sri P. VENKATAGIRIYAPPA (Kolar).—

Will the Chief Minister be pleased to state :—

(*a*) the steps taken by the Government to regularise the service of local candidates who were appointed after 1st January 1965 ;

(*b*) whether it has come to the notice of Government that Public Service Commission selects candidates for the vacancies against which the present local candidates are working ;

(SRI P. VENKATAGIRIYAPPA)

(*c*) if services of these local candidates are not regularised will they not suffer on account of their crossing age bar and unemployment, etc.;

(*d*) the remedy proposed to be provided by Government to avoid the above trouble to the present local candidates;

(*e*) whether Government has extended the same benefits granted to the local candidates appointed prior to 1st January 1960 and 1st January 1965 to those appointed thereafter?

Sri VEERENDRA PATIL (Chief Minister).—

(*a*) The matter is under consideration.

(*b*) Yes.

(*c*) No. They are entitled to age exemption to the extent of the years of service put in as local candidates, when they apply for regular recruitment.

(*d*) Instructions have been issued through the Heads of Departments that local candidates should be encouraged to apply for absorption against regular vacancies when regular recruitment takes place.

(*e*) In view of reply to clause (*a*), this does not arise.

† ಶ್ರೀ ಪಿ. ವೆಂಕಟಗಿರಿಯಪ್ಪ. - ಈಗ ಕೆಲಸ ಮಾಡುತ್ತಿರುವ ಸ್ಥಳೀಯ ಅಭ್ಯರ್ಥಿಗಳ ಹುದ್ದೆಗಳಿಗೆ ರೋಕಸೇವಾ ಆಯೋಗದವರು ಅಭ್ಯರ್ಥಿಗಳನ್ನು ಆರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದೀರಿ, ಈಗ 3-4 ವರ್ಷಗಳಿಂದ ಕೆಲಸ ಮಾಡುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಬಿಟ್ಟು ಹೊಸದಾಗಿ ಎಸ್. ಎಸ್. ಎಲ್.ಸಿ. ಪಾಸು ಮಾಡಿರತಕ್ಕವರನ್ನು ರೋಕ ಸೇವಾ ಆಯೋಗದವರು ನೇಮಕ ಮಾಡಿ ಸ್ಥಳೀಯ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಆ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಾ?

†ಶ್ರೀ ವೀರೇಂದ್ರ ಪಾಟೀರ್.—ಏನೂ ಅನ್ಯಾಯ ಆಗಿಲ್ಲ ಸರಿಪಡಿಸುವುದಕ್ಕೆ.

Sri BAPU GOWDA.—Is it not a fact that when the appointments of the local candidates are not regularised, they will become ineligible for Government Service on account of age bar?

Sri VEERENDRA PATIL.—No, Sir. In my reply I have already stated that they are entitled to age exemption to the extent of the years of service put in as local candidates, when they apply for regular recruitment.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಕೂಡ ಒಂದು ಸಂದರ್ಭದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಒಂದು ಸಮಸ್ಯೆಯ ಬಗ್ಗೆ ಪರಿಹಾರವನ್ನು ಸೂಚನೆ ಮಾಡಿದ್ದರು. ಏಜ್ ಎಗ್ಸಂಪ್ಷನ್ ಕೊಡುವುದು ಬ್ರಿಟೀಷರ ಕಾಲದಿಂದಲೂ ಬರುತ್ತಿದೆ. ನೀವು ಏತಕ್ಕೆ ಎಲ್ಲಾ ಇಲಾಖೆಗಳಿಗೂ ಸ್ಥಳೀಯವಾಗಿ ಜನರನ್ನು ನೇಮಕ ಮಾಡಿಕೊಳ್ಳುವಂತಹ ಅಧಿಕಾರವನ್ನು ಮುಂದುವರಿಸಿಕೊಂಡು ಬರುತ್ತಿದ್ದೀರಿ? ಸ್ಥಳೀಯವಾಗಿ ನೇಮಕ ಮಾಡಿಕೊಂಡ

ಮೇರೆ ಅವರ ಹುದ್ದೆಗಳನ್ನು ಏತಕ್ಕೆ ನಕಾಲದಲ್ಲಿ ಕ್ರಮಗೊಳಿಸುವುದಿಲ್ಲ ? ಲೋಕ ಸೇವಾ ಆಯೋಗ ದವರು ಜೀವಂತರಾಗಿದ್ದಾರೆಯೋ ಇಲ್ಲವೋ ? ಈ ಹಿಂದೆಯೇ ಅವರು ಅರ್ಜಿಗಳನ್ನು ಕರೆದು ಏತಕ್ಕೆ ನೇಮಕ ಮಾಡಲಿಲ್ಲ? ಈಗ ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಗಳ ಹುದ್ದೆಗಳಿಗೆ ಏನು ಅರ್ಜಿಯನ್ನು ಕರೆದಿದ್ದರು ಅದಕ್ಕೆ 25 ಸಾವಿರ ಜನಗಳು ಅರ್ಜಿಯನ್ನು ಹಾಕಿದ್ದಾರೆ. ಈ ರೀತಿ ಏತಕ್ಕೆ ಮಾಡ ಬೇಕು, ಈ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರದಲ್ಲಿ ಕ್ರಮವಾದ ಹುದ್ದೆಗಳಿಗೆ ಕ್ರಮವಾದ ನೇಮಕ ನಡೆದಿದೆ ಎಂದು ಹೇಳಿದ್ದಾರೆ. ಇದು ಸರಿಯೇ ? ಸರ್ಕಾರದವರು ಆ ರೀತಿ ಸೂಚನೆ ಯನ್ನು ಕೊಡಬಹುದೇ ? ಮತ್ತು ಈಗ ಸ್ಥಳೀಯವಾಗಿ ಕೆಲಸ ಮಾಡಿರತಕ್ಕಂಥ ಒಂದು ವರ್ಷ ಕ್ಕಿಂತ ಹೆಚ್ಚು ಸೇವೆ ಸಲ್ಲಿಸಿರತಕ್ಕ ಎರ್ಲಾ ಅರ್ಹತೆಯನ್ನು ಪಡೆದಿರುವ 4-5 ಸಾವಿರ ಜನಗಳನ್ನು ಖಾಯಂಗೊಳಿಸುವುದಕ್ಕೆ ಉಳಿದಿರುವಾಗ ಆ ಹುದ್ದೆಗಳಿಗೆ ಲೋಕ ಸೇವಾ ಆಯೋಗದವರು ಏತಕ್ಕೆ ಆಯ್ಕೆ ಮಾಡಬೇಕು ? ಈ ಅನ್ಯಾಯವನ್ನು ತಾವು ನೋಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀರ್.—ಸ್ಥಳೀಯ ಅಭ್ಯರ್ಥಿಗಳು ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ಪತ್ತೆ ಹಚ್ಚುವುದು ಕಷ್ಟವಾಗಿದೆ. ಯಾವ ಯಾವ ಇರಾಖೆಗಳಲ್ಲಿ ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ಪತ್ತೆ ಹಚ್ಚಬೇಕಾದರೆ ಇನ್ನೂ ಸಾಕಷ್ಟು ಸಮಯ ಬೇಕಾಗುತ್ತದೆ. ಈ ಬಗ್ಗೆ ಸರ್ಕಾರದ ಅಭಿ ಪ್ರಾಯವನ್ನು, ನೀತಿಯನ್ನು ಸ್ಪಷ್ಟಪಡಿಸಿದ್ದೇವೆ. ಪಿ.ಎಸ್.ಸಿ. ಅವರು ಕಾರ್ಫಾರ್ ಮಾಡಿ ದಾಗ ಆಯಾ ಇಲಾಖೆಯಲ್ಲಿರುವ ಸ್ಥಳೀಯ ಅಭ್ಯರ್ಥಿಗಳು ಸಹ ಅರ್ಜಿ ಹಾಕಿಕೊಳ್ಳುವಂತೆ ಪ್ರೊತ್ಸಾ ಹಿಸಬೇಕೆಂದು ಇರಾಖಾ ಮುಖ್ಯಾಧಿಕಾರಿಗಳಿಗೆ ಸರ್ಕುಲರ್ ಮೂಲಕ ಸ್ಪಷ್ಟಪಡಿಸಿದ್ದೇವೆ. ಆಯಾ ಇಲಾಖೆಯವರು ತಮಗೆ ಬೇಕಾದವರನ್ನು ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕ ಮಾಡಿ ಕೊಂಡಿರುತ್ತಾರೆ. ಇಂತಹವರನ್ನೆರ್ಲಾ ಕಾಯಂ ಮಾಡುವುದಾದರೆ ಪಿ.ಎಸ್.ಸಿ.ಯ ಅವಶ್ಯಕತೆಯೇ ಇರುವುದಿಲ್ಲ. ಮತ್ತು ಹರಿಜನ ಮತ್ತು ಗಿರಿಜನರಿಗೆ ಎಷ್ಟು ಪರ್‌ಸೆಂಟ್ ಕೊಡಬೇಕೆಂದು ನಿಯಮ ಇದೆಯೋ ಅದನ್ನು ಕಾರ್ಯರೂಪದಲ್ಲಿ ತರುವ ಬಗ್ಗೆ ಗ್ಯಾರಂಟಿ ಕೊಡುವುದಕ್ಕಾಗುವುದಿಲ್ಲ. ಈಗ ಒಂದು ಹಂತದಲ್ಲಿ ರೆಗ್ಯುಲರೈಸ್ ಮಾಡಿ ಇನ್ನು ಮುಂದೆ ಆ ರೀತಿ ಮಾಡದಾರದೆಂಬ ಧೋರಣೆ ನಮ್ಮ ಮನಸ್ಸಿನಲ್ಲಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಕೆಲಸದಲ್ಲಿರುವ ಕೆಲವು ಅಭ್ಯರ್ಥಿಗಳು ಇರಾಖಾ ಚೈ ನ್ಜಿಂಗ್ ಮಾಡಿಕೊಂಡಿದ್ದಾರೆ. ಇಂತಹವರನ್ನು ಹೊರಗೆ ಕಳಿಸಿ ಹೊಸಬರನ್ನು ನೇಮಕ ಮಾಡಿಕೊಂಡರೆ ಸರ್ಕಾರದ ಕೆಲಸ ನಿಧಾನವಾಗುವುದಿಲ್ಲವೇ ಮತ್ತು ಎಫಿಷಿಯನ್ಸಿ ಕಡಿಮೆ ಯಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಸ್ಥಳೀಯ ಅಭ್ಯರ್ಥಿಗಳನ್ನು ಹೊರಗೆ ಕಳಿಸಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಅದಕ್ಕಾಗಿ ವೇಕೆನ್ಸಿ ಬಿದ್ದಾಗ ಪಿ. ಎಸ್. ಸಿ. ಅವರು ಅಪ್ಲಿಕೇಷನ್ ಕಾರ್ಫರ್ ಮಾಡಿದಾಗ ಇರಾಖಾ ಮುಖ್ಯಾಧಿಕಾರಿಗಳಿಗೆ ಸರ್ಕುಲರ್ ಕಳಿಸಿ ತಮ್ಮಲ್ಲಿರುವ ಸ್ಥಳೀಯ ಅಭ್ಯರ್ಥಿಗಳು ಅರ್ಜಿ ಹಾಕಿಕೊಳ್ಳುವಂತೆ ಪ್ರೊತ್ಸಾಹಿಸಬೇಕೆಂದು ಹೇಳಿದ್ದೇವೆ. ಮತ್ತು ಅವರು ಅರ್ಜಿ ಹಾಕಿಕೊಂಡಾಗ ಸ್ಥಳೀಯ ಅಭ್ಯರ್ಥಿಗಳಾಗಿ ಅವರು ಸೇವೆ ಸಲ್ಲಿಸಿರುವಷ್ಟು ಅವಧಿ ಯನ್ನು ಅವರ ವಯಸ್ಸಿನಲ್ಲಿ ವಿನಾಯಿತಿಯನ್ನು ಪಡೆದುಕೊಳ್ಳಲು ಅವರು ಅರ್ಹರಾಗಿರುತ್ತಾರೆಂದು ಹೇಳಲಾಗಿದೆ. ಆದ್ದರಿಂದ ಇರಾಖೆಯ ಮುಖ್ಯಾಧಿಕಾರಿಗಳು ಪಿ. ಎಸ್. ಸಿ.ಯ ಪರೀಕ್ಷೆಗೆ ಕೂರು ವಂತೆ ಒತ್ತಾಯ ಪಡಿಸಬೇಕು. ಈಗಾಗಲೇ ಎಷ್ಟೋ ಜನ ಪರೀಕ್ಷೆಗೆ ಕೂತಿದ್ದಾರೆ. ಮತ್ತು ಪ್ರತಿಯೊಂದು ಇರಾಖೆಯವರು ತಮ್ಮಲ್ಲಿ ಎಷ್ಟು ಜನ ಸ್ಥಳೀಯ ಅಭ್ಯರ್ಥಿಗಳು ಇದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಇಷ್ಟರಲ್ಲಿಯೇ ಕಳಿಸುವುದರಲ್ಲಿ ಇದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ.—ಲೋಕ ಸೇವಾ ಆಯೋಗದವರು ಅಸಿಸ್ಟೆಂಟ್ ಇಂಜನಿಯರ್ ಗಳನ್ನು ತಹಶೀಲ್‌ದಾರರನ್ನು, ಬಿ.ಡಿ.ಓ.ಗಳನ್ನು ಮತ್ತು ಇನ್ನಿತರ ಮುಖ್ಯ ಹುದ್ದೆಗಳಿಗೆ ಅಭ್ಯರ್ಥಿ ಗಳನ್ನು ನೇಮಕ ಮಾಡುವಾಗ ಪ್ರತಿಯೊಂದು ಸ್ಥಾನಕ್ಕೆ ಇಷ್ಟು ಎಂದು ನಿಗದಿ ಮಾಡಿ ತೆಗೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ರೀತಿ ನಡೆಯುತ್ತಿರುವುದರಿಂದ ಕೆಲಸ ಸಿಗುತ್ತದೆಂದು ಹರಿಕೆ ಹೊತ್ತು ಕುಳಿತಿರುವ ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದರು ಎಂಬುದು ನನಗೆ ಅರ್ಥವಾಗಲಿಲ್ಲ. ಪ್ರತಿಯೊಂದು ಪೋಸ್ಟ್‌ಗೂ ಇಂತಿಷ್ಟು ಹಣ ತೆಗೆದುಕೊಳ್ಳುತ್ತಿದ್ದಾರೆಂದು ಅವರು ಹೇಳುತ್ತಿರಬಹುದು. ಒಂದು ವೇಳೆ ಮಾನ್ಯ ಸದಸ್ಯರು ದುಡ್ಡು ಇಲ್ಲದೆ, ಬೈ ಸಿಕಲ್ ಇಲ್ಲದೆ, ರೆಕಮೆಂಡ್ ಇಲ್ಲದೆ ಕೆಲಸ ಸಿಗುವಂತಿಲ್ಲ ಎಂದು ಹೇಳುವುದಾದರೆ ಅದು ಬಹಳ ಅನ್‌ಫೇರ್ ಎಂದು

(ಶ್ರೀ ವೀರೇಂದ್ರ ಪಾಟೀಲ್)

ಕಾಣುತ್ತದೆ. ಇಲ್ಲಿ ಪಿ.ಎಸ್.ಸಿ. ಸದಸ್ಯರು ಯಾರೂ ಇಲ್ಲ. ಮತ್ತು ಅವರ ಹಿತರಕ್ಷಣೆ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ನನಗೆ ಗೊತ್ತಿರುವಂತೆ ನಾನು ಮುಖ್ಯಮಂತ್ರಿಯಾದ ಮೇಲೆ ಇಲ್ಲಿಯವರೆಗೂ ಪಿ.ಎಸ್.ಸಿ.ಯ ಯಾವ ಮೆಂಬರ್ ಮೇಲೂ ಯಾವ ತರಹವಾದ ದೂರೂ ಬಂದಿಲ್ಲ. ಈ ಮನೆಯ ಸದಸ್ಯರಿಂದಲೂ ಕೂಡ ಬಂದಿಲ್ಲ. ಆದ್ದರಿಂದ ವಿನಾಕಾರಣ ದೋಷಾರೋಪಣೆ ಮಾಡುವುದು ಸರಿಯಿಲ್ಲವೆಂದು ಕಾಣುತ್ತದೆ.

ಶ್ರೀಮತಿ ಕೆ. ಲೀಲಾವತಿ ರೈ.—ಲೋಕಲ್ ಕ್ಯಾಂಡಿಡೇಟ್‌ಗಳನ್ನು ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿರುವಾಗ ಅವರು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಬಂದ ಮೇಲೆ ಅವರು ಪಟ್ಟಿಗಳನ್ನು ಕಳುಹಿಸುವಾಗ ಕೆಲವರಿಗೆ ಸೀನಿಯಾರಿಟಿ ವಿಷಯದಲ್ಲಿ ಅನ್ಯಾಯಗಳಾಗುತ್ತಿವೆ ಎಂದು ಕೇಳಿ ಬರುತ್ತಿವೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಲೋಕಲ್ ಕ್ಯಾಂಡಿಡೇಟುಗಳು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಬಂದಾಗ ಅವರು ಒಂದು ಷಟ್ಟಿಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. ಆ ಪಟ್ಟಿಯನ್ನು ಸರಕಾರದವರು ಒಪ್ಪಿಕೊಳ್ಳುತ್ತಾರೆ. ಪಟ್ಟಿ ಬಂದ ಮೇಲೆ ಅವರು ಯಾವ ರೀತಿ ಆರ್ಡರು ಕೊಟ್ಟಿದ್ದಾರೋ ಆದರಂತೆ ಸೀನಿಯಾರಿಟಿ ಬರುತ್ತದೆ.

Sri G. CHANDRAKANTH.—Is it not a fact that the then Chief Minister Sri Nijalingappa had assured in the Upper House on 11th April 1966 that no local candidate would be thrown out of employment and that their services would be regularised and may I know whether that assurance has been carried out ?

Sri VEERENDRA PATIL.—I do not know what assurance was held out by my predecessor. If the hon'ble member brings it to my notice, I shall look into it.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ನಾಲ್ಕೈದು ವರ್ಷಗಳ ಕಾಲ ಲೋಕಲ್ ಕ್ಯಾಂಡಿಡೇಟುಗಳಾಗಿ ಕೆಲಸ ಮಾಡಿದ ಮೇಲೆ ಇವರನ್ನು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್‌ಗೆ ಕುಳಿತುಕೊಂಡು ಪಾಸು ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಆದರೆ ಇವರು ಸಂಸಾರ ತಾಪತ್ರಯಗಳಲ್ಲಿ ಸರಿಯಾಗಿ ಓದದೆ ಪರೀಕ್ಷೆಗಳಲ್ಲಿ ಕೆಲವರು ಫೇಲ್ ಆಗುತ್ತಾರೆ. ಇಂತಹವರ ಗತಿ ಏನು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರ ನನಗೆ ಅರ್ಥವಾಗಲೊಲ್ಲದು. ಲೋಕಲ್ ಕ್ಯಾಂಡಿಡೇಟ್ ಮೊದಲು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್ಸ್‌ಗೆ ಹೋಗುವುದಿಲ್ಲ. ಅವರು ಎಸ್. ಎಸ್. ಎಲ್. ಸಿ. ಪಾಸು ಮಾಡಿಕೊಂಡು ಮೂರು ನಾಲ್ಕು ವರ್ಷಗಳ ಕಾಲ ಕೆಲಸದಲ್ಲಿದ್ದು ಟ್ರೇನಿಂಗು ಪಡೆದು ಅನಂತರ ಪರೀಕ್ಷೆಗೆ ಹೋಗುತ್ತಾರೆ. ಆದರೆ ಕೆಲವರು ಎಸ್. ಎಸ್. ಎಲ್. ಸಿ. ಆದವರು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್‌ಗೆ ಮೊದಲೇ ಬರುತ್ತಾರೆ. ಆದರೆ ಕೆಲಸದಲ್ಲಿದ್ದು ಮೊದಲೇ ಟ್ರೇನಿಂಗು ಪಡೆದವರಿಗೆ ಈ ಪರೀಕ್ಷೆಗಳು ಅಷ್ಟು ಕಷ್ಟವಾಗಲಿಕ್ಕಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮುಖ್ಯ ಮಂತ್ರಿಗಳು ಪಿ. ಎಸ್. ಸಿ. ಮೂಲಕ ಸ್ಥಳೀಯ ಅಭ್ಯರ್ಥಿಗಳನ್ನೆರ್ಪಾಡು ಕ್ರಮಗೊಳಿಸುತ್ತೇವೆ ಎಂದು ಹೇಳಿದರು. ಆದರೆ ಡೈರೆಕ್ಟ್ ರೆಕ್ರೂಟುಮೆಂಟು ರೂಲ್ಸಿನಲ್ಲಿ ಶೇಕಡ 30 ರಷ್ಟು ಫಾರ್ವರ್ಡ್ ಕ್ಲಾಸು ಶೇಕಡ 18 ರಷ್ಟು ಷೆಡ್ಯೂಲು ಕ್ಯಾಸ್ಟ್ ಹಾಗೂ ಷೆಡ್ಯೂಲು ಟ್ರೈಬ್ಸ್‌ನವರಿಗೆ ಮತ್ತು ಶೇಕಡಾ 52 ರಷ್ಟು ಓಪನ್ ಮಾರ್ಕೆಟ್ಟಿನಲ್ಲಿ ಎಂದು ನಿಯಮಗಳನ್ನು ಅನುಸರಿಸಿ ಮಾಡುತ್ತಿದ್ದರೂ ಇದನ್ನು ಕ್ರಮಗೊಳಿಸುವಾಗ ಷೆಡ್ಯೂಲು ಕ್ಯಾಸ್ಟು ಹಾಗೂ ಷೆಡ್ಯೂಲು ಟ್ರೈಬ್ಸ್‌ನವರು ಕಡಿಮೆ ಸಂಖ್ಯೆಯಲ್ಲಿದ್ದರೆ ಆ ಸಂಖ್ಯೆಯನ್ನು ಪೂರ್ತಿ ಕೋಟಾವರೆಗೆ ಭರ್ತಿ ಮಾಡಲು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಏಕೆ ಹೇಳಲಿಲ್ಲ ಎಂದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಮೂಲಕ ಬರುವ ಪಟ್ಟಿಗೆ ಗ್ಯಾರಂಟಿ ಇರುತ್ತದೆ. ಇದರಲ್ಲಿ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಹಾಗೂ ಫಾರ್ವರ್ಡ್ ಕ್ಲಾಸಿನವರಿಗೆ ಇಷ್ಟು ಎಂದು ಇರುತ್ತದೆ. ಅದನ್ನು ನೋಡಿಕೊಂಡೇ ಅವರು ಚುನಾಯಿಸಿ ಪಟ್ಟಿ ಮಾಡಿ ಕಳುಹಿಸಿದ ಮೇಲೆ ಇವರನ್ನು ರೆಗ್ಯೂಲರೈಸೇಷನ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಕನಿಷ್ಟ ಪಕ್ಷ ಯಾರು ಆರು ತಿಂಗಳ ಕಾಲ ರೋಕರ್ ಕ್ಯಾಂಡಿಡೇಟ್ ಆಗಿ ಕೆಲಸ ಮಾಡುತ್ತಿರುತ್ತಾರೋ ಅಂತಹವರನ್ನು ರೆಗ್ಯುಲರೈಸು ಮಾಡುವಾಗ ಪ್ರಾಶಸ್ತ್ಯ ಕೊಡುತ್ತೇವೆ ಎಂದು ಹೇಳಿರುವುದರಿಂದ ಪಿ. ಎಸ್. ಸಿ. ನವರೂ ಕೂಡ ಇದೇ ನೀತಿ ಅನುಸರಿಸುವುದರಲ್ಲಿ ಇರುವ ತೊಂದರೆಯೇನು ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಪ್ರಾಶಸ್ತ್ಯ ಕೊಟ್ಟರೆ, ಈಗತಾನೆ ಮಾನ್ಯ ಸದಸ್ಯರಾದ ಶ್ರೀಮಾನ್ ಜಯಪ್ರಕಾಶ ನಾರಾಯಣ್‌ರವರು ಹೇಳಿದ ಹಾಗೆ ಯಾವ ಗ್ಯಾರಂಟೀಯನ್ನು ಕೊಡುವುದಕ್ಕೆ ಆಗುವುದಿಲ್ಲ. ಆರು ತಿಂಗಳ ಮೇಲೆ ಎಂದು ನೋಡುವುದಕ್ಕಿಂತ ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್ಸ್‌ಗೆ ಹೋದಾಗ ಅವರು ಎಲ್ಲಾ ನಿಯಮದಂತೆ ರಿಸರ್ವೇಷನ್‌ಗೆ ಥಕ್ಕೆ ಬಾರದಂತೆ ಪಟ್ಟಿ ತಯಾರು ಮಾಡಿ ಸರಕಾರಕ್ಕೆ ಕಳುಹಿಸುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಹಿಂದೆ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಏನು ಆಶ್ವಾಸನೆ ಕೊಟ್ಟಿದ್ದಾರೋ ಅದು ನನಗೆ ಗೊತ್ತಿಲ್ಲ ಎಂದು ಹೇಳಿದರು. ಅದು ಸರಕಾರದ ಮುಂದೆಯೇ ಇದೆ. ಮತ್ತು ಇವರು ಕೊಟ್ಟಿರುವ ಉತ್ತರದಲ್ಲೇ ಇದೆ. 11-1-60 ಮತ್ತು 1-1-68ಕ್ಕೆ ಮುಂಚಿತವಾಗಿ ನೇಮಕವಾದವರಿಗೆ ಇದೇ ಸೌಲಭ್ಯಗಳನ್ನು ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಅದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಸ್ಥಳೀಯ ಅಭ್ಯರ್ಥಿಗಳನ್ನೆಲ್ಲಾ ರೆಗ್ಯುಲರೈಸು ಮಾಡುವುದಕ್ಕೆ ಪ್ರಾಶಸ್ತ್ಯ ಕೊಡುತ್ತೇವೆ ಎಂದು ಅವರೇ ಹೇಳುತ್ತಾರೆ. ಇದು ಒಂದಕ್ಕೊಂದು ವಿರುದ್ಧವಾದ ಅಭಿಪ್ರಾಯಕ್ಕೆ ಎಡೆ ಕೊಡುತ್ತದೆ. ಈಗಾಗಲೇ ಪೆಡ್ಯೂಲು ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ನವರನ್ನು ನೇಮಕ ಮಾಡುವಾಗ ಅನೇಕ ಅನ್ಯಾಯಗಳಾಗಿವೆ ಅದರ ಬಗ್ಗೆ ಏನು ಮಾಡಬೇಕು ಎಂದು ಕೇಳಿದರೆ ಅದರ ಬಗ್ಗೆ ಏನೂ ಹೇಳದೆ ಇರುವುದು ಅಷ್ಟು ಸಮಂಜಸವಾಗುವುದಿಲ್ಲ. ನನಗೆ ರೋಕಸೇವಾ ಆಯೋಗದವರನ್ನು ದೂರಬೇಕು ಎನ್ನುವ ಅಭಿಪ್ರಾಯ ನನಗೆ ಇಲ್ಲ. ಸರ್ಕಾರದವರು ಇಂತಹ ಇಲಾಖೆಗೆ ಇಷ್ಟು ಜನ ಬೇಕು, ಕ್ವಾಲಿಫಿಕೇಷನ್ ಹೀಗೆ ಇರಬೇಕು ಇಷ್ಟು ವರ್ಷದಲ್ಲಿ ನೇಮಕಮಾಡಿಕೊಳ್ಳಬೇಕು ಎನ್ನುವ ಆದೇಶ ಕೊಡದೆ ಇದ್ದರೆ ಪಿ. ಎಸ್. ಸಿ. ನವರು ಏನೂ ಮಾಡುವುದಕ್ಕಾಗುವುದಿಲ್ಲ. ಈ ಜವಾಬ್ದಾರಿಯನ್ನು ಏಕೆ ನಿರ್ವಹಿಸಿಲ್ಲ! ಇದಕ್ಕೆ ಏನೇನು ತೊಂದರೆಗಳು ಇವೆ? ಅದುದರಿಂದ ಸರ್ಕಾರದವರು ಮತ್ತು ರೋಕ ಸೇವಾ ಆಯೋಗದವರು ಇಬ್ಬರೂ ತಪ್ಪು ಮಾಡಿರುವುದರಿಂದ ಇದುವರೆಗೆ 4—5—6 ವರ್ಷ ಸೇವೆ ಮಾಡಿದ ಸ್ಥಳೀಯ ಅಭ್ಯರ್ಥಿಗಳು ಏನು ಕೆಲಸ ಮಾಡಿದ್ದಾರೆ ಅವರನ್ನು ಮೊದಲು ರೆಗ್ಯುಲರೈಸ್ ಮಾಡಿ ನಂತರ ಏನು ಸುಧಾರಣೆಗಳನ್ನು ತರಬೇಕೋ ಅದನ್ನು ಜಾರಿಗೆ ತರುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಬೇಕಾಗಿದ್ದರೆ ನನ್ನ ಪೂರ್ವದಲ್ಲಿ ಇದ್ದಂಥ ಶ್ರೀಮಾನ್ ನಿಜಲಿಂಗಪ್ಪನವರು ಏನು ಹೇಳಿದ್ದರೋ ಅವನ್ನು ಏನು ಎಂದು ಅವರು ಇಲ್ಲದೇ ಇರುವಾಗ ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ರೆಗ್ಯುಲರೈಸ್ ಬಗ್ಗೆ ಏನಾದರೂ ಆಶ್ವಾಸನೆ ಕೊಟ್ಟಿದ್ದರೆ ಅವರು ನಡೆಸಿಕೊಂಡು ಬಂದಿದ್ದಾರೆ. 1965ನೇ ಇಸವಿಗಿಂತ ಮುಂಚಿತವಾಗಿ ಇದ್ದ ಕ್ಯಾಂಡಿಡೇಟ್ಸ್ ಎಲ್ಲಾ ರೆಗ್ಯುಲರೈಸ್ ಆಗಿದೆ. ಅದಾದ ಮೇಲೆ ಅಪಾಯಿಂಟ್ ಆಗಿರುವ ರೋಕರ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯುಲರೈಜ್ ಮಾಡಬಾರದು ಎನ್ನುವ ವಿಚಾರ ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ತಿಳಿಸಿದ ಮೇಲೆ, ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಒಂದು ಕಾಂಪಿಟಿಟೀವ್ ಎಕ್ಸಾಮಿನೇಷನ್ ನಡೆಸಿದ್ದಾರೆ. ಇಷ್ಟರಲ್ಲೇ ಆ ಒಂದು ಪಟ್ಟಿ ನಮ್ಮ ಹತ್ತಿರ ಬರುವುದು ಇದೆ.

ಇನ್ನೊಂದು ವಿಷಯ ಏನೆಂದರೆ ಪಬ್ಲಿಕ್ ಸರ್ವಿಸ್‌ನವರಿಗೆ ಇಷ್ಟೇ ಸಮಯದಲ್ಲಿ ಮಾಡಬೇಕೆಂದು ಆದೇಶ ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ, ಅವರು ಗೆಜೆಟ್‌ನಲ್ಲಿ ನೋಟಿಫೈ ಮಾಡಬೇಕು, ಅಪ್ಲಿಕೇಷನ್ ಕಾರ್ಫರ್ ಮಾಡಬೇಕು, ಸರ್ಕುಲರ್ ಹೊರಡಿಸಬೇಕು, ಅದೆಲ್ಲವನ್ನೂ ಮಾಡಿದ್ದಾರೆ. ಇದನ್ನೆಲ್ಲಾ ಮಾಡುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಪೋಸ್ಟ್‌ಗಳು 100—200 ಇದ್ದರೆ, ಹೆಚ್ಚು ಸಂಖ್ಯೆಯಲ್ಲಿ 10 ಸಾವಿರ 20 ಸಾವಿರ ಅಪ್ಲಿಕೇಷನ್ಸ್ ಬರುತ್ತದೆ. ಇದನ್ನೆಲ್ಲಾ ಕ್ರಮಪಡಿಸಿ ಎಕ್ಸಾಮಿನೇಷನ್ ಕಂಡಕ್ಟ್ ಮಾಡಿ ಒಂದು ಪಟ್ಟಿ ತಯಾರು ಮಾಡಿ ಕಳುಹಿಸಬೇಕಾಗಿದ್ದರೆ ಅವಕ್ಕೆಲ್ಲಾ ಸಮಯ ಬೇಕಾಗುತ್ತದೆ. ನನ್ನ ಮನಸ್ಸಿನಲ್ಲಿರುವ ವಿಚಾರ ಹೇಳಿದ್ದೇನೆ. 1965ರಿಂದ ಈಚೆಗೆ ಇರುವಂಥ ರೋಕರ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯುಲರೈಸ್ ಮಾಡಬೇಕು ಎನ್ನುವ ದೃಷ್ಟಿ ಇಟ್ಟುಕೊಂಡಿಲ್ಲ.

ಶ್ರೀ ಕೆ. ಎಸ್. ವೀರಪ್ಪ ಗೌಡ.—ಈಗಾಗಲೇ ಸರ್ಕಾರದವರು ಹೇಳಿದ ಹಾಗೆ ಹೊಸದಾಗಿ ನೇಮಕಗಳನ್ನು ಮಾಡಬೇಕಾದರೆ ಪೇಪರ್‌ನಲ್ಲಿ ಕಾರ್‌ಫಾರ್ ಮಾಡುತ್ತಾರೆ, ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆ, ಸಾಪಿರಾರು ಅಪ್ಲಿಕೇಷನ್ಸ್ ಬರುತ್ತವೆ, ಅದರಲ್ಲಿ ಕಾಂಪಿಟಿಟೀವ್ ಎಕ್ಸಾಮಿನೇಷನ್ ಇಟ್ಟುಕೊಂಡು ಅದರಲ್ಲಿ ಪಾಸ್ ಆದವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ ಎನ್ನುವ ಮಾತು ಹೇಳಿದರು. ಅದು ನಿಜ. ಅದರೆ ಹಿಂದೆ ರೋಸ್ಟರ್ ಅಪಾಯಿಂಟ್‌ಮೆಂಟ್ ಆದವರಿಗೆ ಪಿ. ಎಸ್. ಸಿ. ಯವರು ಪ್ರಾಶಸ್ತ್ಯ ಕೊಡಬೇಕು ಎಂದು ಸರ್ಕಾರದವರು ಹೇಳಿಲ್ಲವೆ ? ಇದರ ಬಗ್ಗೆ ಅವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಇದನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಪಿ. ಎಸ್. ಸಿ. ಅವರೇ ಪೋಸ್ಟ್‌ಗಳಿಗೆ ಕಾರ್‌ಫಾರ್ ಮಾಡಿ, ಅಡ್ಜರ್ಜೈಜ್ ಮಾಡಿ ಕಾಂಪಿಟಿಟೀವ್ ಪರೀಕ್ಷೆ ನಡೆಸುತ್ತಾರೆ. ಅದರಲ್ಲಿ ಮೆರಿಟ್ ಇದ್ದರೆ ಆರಿಸಿ ಬರುತ್ತಾರೆ, ಇಲ್ಲದಿದ್ದರೆ ಇಲ್ಲ.

2-00 P.M.

Water supply for Deodurg Town

481. Sri SADASHIVAPPA PATIL (Deodurg).—

Will the Minister of State for Municipal Administration be pleased to state :—

(*a*) when the Government intend to take up the water supply work for the Deodurg Town ;

(*b*) whether they are aware that in the months of April and May the availability of drinking water to the people of Deodurg proper is very inadequate ?

Sri B. M. PATIL (Minister of State for Municipal Administration).—

(*a*) As early as possible.

(*b*) Yes.

ಶ್ರೀ ಸದಾಶಿವಪ್ಪ ಪಾಟೀಲ್.—ಅದಷ್ಟು ಜಾಗ್ರತೆ ಎಂದರೆ ಸುಮಾರು ಎಷ್ಟು ಶತಕಗಳು ಬೇಕು ? ಅದು ಈಗ ಯಾವ ಹಂತದಲ್ಲಿದೆ ?

† ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಶತಕಗಳ ಪ್ರಶ್ನೆ ಇಲ್ಲ. ಈಗಾಗಲೇ ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ಎಕ್ಸಿಕ್ಯೂಟಿವ್ ಇಂಜಿನಿಯರು ತಯಾರು ಮಾಡಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಕಡೆ ಕಳಿಸಿದ್ದರು. ಅದರಲ್ಲಿ ಕೆಲವು ಚೆಕ್ನಿಕಲ್ ಬದಲಾವಣೆಗಳನ್ನು ಮಾಡಬೇಕಾಗಿದ್ದು ಅದನ್ನು ಸೂಪರಿಂಟೆಂಡಿಂಗ್ ಇಂಜಿನಿಯರು ಚೀಫ್ ಇಂಜಿನಿಯರಿಗೆ ಕಳಿಸಿಕೊಟ್ಟ ನಂತರ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—ನುಮಾರು ಎರಡು ವರ್ಷದಿಂದ ಅದಷ್ಟು ಜಾಗ್ರತೆ ಎಂದು ಹೇಳುವುದಕ್ಕೆ ಹತ್ತಿದ್ದಾರೆ. ಕುಡಿಯುವ ನೀರಿನ ಪ್ರಶ್ನೆಗೇ ಪರಿಶೀಲನೆ ಮಾಡುತ್ತಿದ್ದೇವೆ ಜಾಗ್ರತೆ ಮಾಡುತ್ತೇವೆಂದು ಹೇಳಿದರೆ ಇತರ ಕೆಲಸಗಳನ್ನು ಹೇಗೆ ಮಾಡಲಾಗುತ್ತದೆ ? ನಳಗಳನ್ನು ಹಾಕುವಾಗ ಬಾವಿಯಿಂದ ನೀರು ತರುತ್ತೀರೋ ಹೇಗೆ ಎನ್ನುವುದನ್ನೂ ದಯವಿಟ್ಟು ತಿಳಿಸಬೇಕಾಗುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಪ್ಲಾನ್ ಮತ್ತು ಎಸ್ಟಿಮೇಟ್ ಸರ್ಕಾರಕ್ಕೆ ಬಂದಿಲ್ಲ. ಅದು ಬಂದ ನಂತರ ಅದಷ್ಟು ತೀವ್ರವಾಗಿ ಸರ್ಕಾರ ಇತ್ಯರ್ಥ ಮಾಡುತ್ತದೆ. ಈಗಿನ ಯೋಜನೆಯ ಪ್ರಕಾರ ನಾಲ್ಕು ಬಾವಿಗಳಿಂದ ನೀರು ತರುವ ಯೋಜನೆ ಇದೆ.